# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **276** |
| 2 | **ಸದಸ್ಯರ ಹೆಸರು** | : | **ಶ್ರೀ ಕಿಶೋರ್ ಕುಮಾರ್ ಪುತ್ತೂರ್**<br>**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| 3 | **ಉತ್ತರಿಸುವ ದಿನಾಂಕ** | : | **06.03.2025** |
| 4 | **ಉತ್ತರಿಸುವ ಸಚಿವರು** | : | **ಗೃಹ ಸಚಿವರು** |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ 03 ವರ್ಷಗಳಲ್ಲಿ ಎಷ್ಟು ಪೊಲೀಸ್ ಸಿಬ್ಬಂದಿಗಳ ನೇಮಕಾತಿ ಮಾಡಲಾಗಿದೆ; (ಜಿಲ್ಲಾವಾರು, ನಗರ/ಗ್ರಾಮಾಂತರ ಪ್ರತ್ಯೇಕ ವಿವರ ನೀಡುವುದು)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ 03 ವರ್ಷಗಳಲ್ಲಿ ನೇಮಕಾತಿಹೊಂದಿರುವ ಸಿಬ್ಬಂದಿಗಳ ವಿವರ ಕೆಳಕಂಡಂತ್ತಿರುತ್ತದೆ :-
<table>
<tr><th rowspan="2">ಘಟಕ</th><th colspan="2">2022</th><th colspan="2">2023</th><th colspan="2">2024</th></tr>
<tr><th>ಎಪಿಸಿ</th><th>ಸಿಪಿಸಿ</th><th>ಎಪಿಸಿ</th><th>ಸಿಪಿಸಿ</th><th>ಎಪಿಸಿ</th><th>ಸಿಪಿಸಿ</th></tr>
<tr><td>ಮಂಗಳೂರು ನಗರ</td><td>0</td><td>140</td><td>0</td><td>0</td><td>234</td><td>46</td></tr>
<tr><td>ದಕ್ಷಿಣ ಕನ್ನಡ ಜಿಲ್ಲೆ</td><td>0</td><td>67</td><td>0</td><td>0</td><td>164</td><td>41</td></tr>
<tr><td>ಉಡುಪಿ ಜಿಲ್ಲೆ</td><td>0</td><td>83</td><td>0</td><td>0</td><td>40</td><td>0</td></tr>
<tr><td>ಒಟ್ಟು</td><td>0</td><td>290</td><td>0</td><td>0</td><td>438</td><td>87</td></tr>
</table></td></tr>
<tr><td>ಆ)</td><td>ಈ ನೇಮಕಾತಿಗಳಲ್ಲಿ ಸ್ಥಳೀಯವಾಗಿ ಆಯ್ಕೆಯಾಗಿರುವ ಹಾಗೂ ಹೊರ ಜಿಲ್ಲೆಗಳಿಂದ ಆಯ್ಕೆಯಾಗಿರುವವರ ಶೇಕಡ ಪ್ರಮಾಣ ಎಷ್ಟು; (ವಿವರ ನೀಡುವುದು)</td><td>ಈ ನೇಮಕಾತಿಯಲ್ಲಿ ಆಯ್ಕೆಯಾಗಿರುವ ಸ್ಥಳೀಯ ಮತ್ತು ಹೊರಜಿಲ್ಲೆಗಳ ಅಭ್ಯರ್ಥಿಗಳ ವಿವರ ಕೆಳಕಂಡಂತ್ತಿರುತ್ತದೆ :-
<table>
<tr><th colspan="2">ಸ್ಥಳೀಯ ಅಭ್ಯರ್ಥಿಗಳು</th><th colspan="2">ಹೊರ ಜಿಲ್ಲೆಯವರು</th><th rowspan="2">ಆಯ್ಕೆಯಾಗಿರುವ ಒಟ್ಟು ಅಭ್ಯರ್ಥಿಗಳು</th></tr>
<tr><th>ಸಂಖ್ಯೆ</th><th>ಶೇಕಡವಾರು</th><th>ಸಂಖ್ಯೆ</th><th>ಶೇಕಡವಾರು</th></tr>
<tr><td>78</td><td>9.57%</td><td>737</td><td>90.43%</td><td>815</td></tr>
</table></td></tr>
<tr><td>ಇ)</td><td>ಈ ನೇಮಕಾತಿಗಳಲ್ಲಿ ಎಷ್ಟು ಸ್ಥಳೀಯ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಿದ್ದರು; ಇವರ ನೇಮಕಾತಿಯಾಗದಿರಲು ಕಾರಣವೇನು?</td><td>ಈ ನೇಮಕಾತಿಗಳಿಗೆ ಹೊರಡಿಸಲಾದ ಅಧಿಸೂಚನೆಗಳಲ್ಲಿ ಕೆಳಗೆ ನಮೂದಿಸಿರುವಂತೆ ಸ್ಥಳೀಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುತ್ತಾರೆ.
<table>
<tr><th>ಅಧಿಸೂಚನೆ ವಿವರ</th><th>ಸ್ಥಳೀಯ ಅಭ್ಯರ್ಥಿಗಳ ಸಂಖ್ಯೆ</th></tr>
<tr><td>01/ನೇಮಕಾತಿ-4/2021-22 ದಿ:21.05.2021</td><td>8539</td></tr>
<tr><td>07/ನೇಮಕಾತಿ-4/2022-23ದಿ:12.09.2022</td><td>3937</td></tr>
<tr><td>06/ನೇಮಕಾತಿ-4/2022-23 ದಿ:12.10.2022</td><td>2799</td></tr>
<tr><td>ಒಟ್ಟು</td><td>15275</td></tr>
</table>
ಅಭ್ಯರ್ಥಿಗಳ ಆಯ್ಕೆಯನ್ನು Physical Standard Test, Physical Efficiency Testರಲ್ಲಿನ ಅರ್ಹತೆ ಮತ್ತು ಲಿಖಿತ ಪರೀಕ್ಷೆಗಳಲ್ಲಿ ಗಳಿಸಿರುವ ಅಂಕಗಳ ಮೆರಿಟ್ ಅನುಸಾರ ಮಾಡಲಾಗುತ್ತಿದ್ದು, ಸ್ಥಳೀಯ ಅಭ್ಯರ್ಥಿಗಳು ದೈಹಿಕ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದರೇ ಅಥವಾ ಲಿಖಿತ ಪರೀಕ್ಷೆಗಳಲ್ಲಿ ಕಡಿಮೆ ಅಂಕಗಳನ್ನು ಗಳಿಸಿದಲ್ಲಿ ನೇಮಕಾತಿಗೆ ಪರಿಗಣಿಸಲ್ಪಡುವುದಿಲ್ಲ.</td></tr>
</table>

| | | |
|---|---|---|
| ಈ) | ಹೊರ ಜಿಲ್ಲೆಗಳಿಂದ ನೇಮಕಾತಿ ಆಗಿರುವ ಅಭ್ಯರ್ಥಿಗಳು ಹೆಚ್ಚಿರುವುದರಿಂದ ಇವರುಗಳಿಗೆ ಇಲ್ಲಿ ಕಾರ್ಯನಿರ್ವಹಿಸುವಾಗ ಭಾಷೆಯ (ತುಳು) ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದ ಕೆಲವೊಂದು ಪ್ರಕರಣಗಳನ್ನು ಭೇಧಿಸುವಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ; | ಹೊರ ಜಿಲ್ಲೆಗಳಿಂದ ನೇಮಕಾತಿಯಾಗಿರುವ ಸಿಬ್ಬಂದಿಗಳು ಸಾರ್ವಜನಿಕರೊಂದಿಗೆ ಆಡಳಿತ ಭಾಷೆ ಕನ್ನಡದಲ್ಲಿ ವ್ಯವಹರಿಸಿ ದೈನಂದಿನ ಕರ್ತವ್ಯವನ್ನು ಹಾಗೂ ಪ್ರಕರಣಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದು, ಸ್ಥಳೀಯರೊಂದಿಗೆ ವ್ಯವಹರಿಸಲು ಹಾಗೂ ಪ್ರಕರಣಗಳನ್ನು ಭೇದಿಸುವಾಗ ಭಾಷೆಯಿಂದ (ತುಳು) ತೊಂದರೆಯಾಗಿರುವ ಬಗ್ಗೆ ಯಾವುದೇ ವರದಿಯಾಗಿರುವುದಿಲ್ಲ. |
| ಉ) | ಮುಂದೆ ನಡೆಯುವ ನೇಮಕಾತಿಗಳಲ್ಲಿ ಸ್ಥಳೀಯ ಅಭ್ಯರ್ಥಿಗಳ ನೇಮಕಾತಿಗೆ ಆದ್ಯತೆ ನೀಡಲಾಗುವುದೇ; | ಸ್ಥಳಿಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| ಊ) | ಸದರಿ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪೊಲೀಸ್ ಸಿಬ್ಬಂದಿಗಳು (ಸಿ ವರ್ಗ) ಬೇರೆ ಬೇರೆ ಜಿಲ್ಲೆಗಳಿಗೆ ವರ್ಗಾವಣೆಗೊಂಡಿರುತ್ತಾರೆ? (ಜಿಲ್ಲಾವಾರು ವಿವರ ನೀಡುವುದು) | ಕಳೆದ 03 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳಿಂದ ಇತರ ಜಿಲ್ಲೆಗಳಿಗೆ ವರ್ಗಾವಣೆಗೊಂಡಿರುವ ಸಿಬ್ಬಂದಿಗಳ ಸಂಖ್ಯಾ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |

**ಹೆಚ್‌ಡಿ 53 ಪಿಪಿಎಸ್ 2025**

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು

**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 276 ರ ಅನುಬಂಧ**

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಿಂದ (ಮಂಗಳೂರು ನಗರ ಸೇರಿದಂತೆ) ಇತರ ಜಿಲ್ಲೆಗಳಿಗೆ ವರ್ಗಾವಣೆಹೊಂದಿರುವ ಸಿಬ್ಬಂದಿಗಳ ಸಂಖ್ಯಾ ವಿವರ:

| ಕ್ರ. ಸಂ. | ವರ್ಗಾವಣೆಗೊಂಡಿರುವ ಜಿಲ್ಲೆ | ಉಡುಪಿ ಜಿಲ್ಲೆಯಿಂದ | ದಕ್ಷಿಣ ಕನ್ನಡ ಜಿಲ್ಲೆಯಿಂದ | ಮಂಗಳೂರು ನಗರ ಘಟಕದಿಂದ |
|---|---|---|---|---|
| 1. | ಚಿಕ್ಕಮಗಳೂರು | 3 | 1 | 0 |
| 2. | ಶಿವಮೊಗ್ಗ | 1 | 2 | 0 |
| 3. | ದಕ್ಷಿಣ ಕನ್ನಡ | 0 | 0 | 1 |
| 4. | ಹಾವೇರಿ | 1 | 0 | 0 |
| 5. | ವಿಜಯನಗರ | 2 | 1 | 0 |
| 6. | ಬೆಂಗಳೂರು ನಗರ | 1 | 1 | 0 |
| 7. | ಹಾಸನ | 0 | 1 | 1 |
| 8. | ದಾವಣಗೆರೆ | 0 | 1 | 2 |
| 9. | ಬಳ್ಳಾರಿ | 0 | 1 | 0 |
| 10. | ಬೆಳಗಾವಿ | 0 | 1 | 2 |
| 11. | ಉತ್ತರ ಕನ್ನಡ | 1 | 1 | 0 |
| 12. | ಮೈಸೂರು | 0 | 2 | 0 |
| 13. | ಹುಬ್ಬಳ್ಳಿ-ಧಾರವಾಡ ನಗರ | 0 | 3 | 1 |
| 14. | ಬಾಗಲಕೋಟೆ | 0 | 1 | 3 |
| 15. | ತುಮಕೂರು | 0 | 0 | 1 |
| 16. | ಕಲಬುರಗಿ | 0 | 0 | 1 |
| 17. | ಕೊಡಗು | 0 | 0 | 1 |
| 18. | ವಿಜಯಪುರ | 0 | 0 | 1 |
| | **ಒಟ್ಟು** | **9** | **16** | **14** |